ಕ್ರಮ ಸಂಖ್ಯೆ	ಜಿಲ್ಲೆ	ವಿತರಿಸಿರುವ ಹಸಿರು ಪಡಿತರ ಚೀಟಿಗಳು
16.	ಗುಲ್ಬರ್ಗಾ	427884
17.	ಹಾಸನ	255115
18.	ಹಾವೇರಿ	217250
19.	ಕೊಡಗು	72454
20.	ಕೋಲಾರ	360528
21.	ಕೊಪ್ಪಳ	149921
22.	ಮಂಡ್ಯ	292237
23.	ಮೈಸೂರು	330264
24.	ರಾಯಚೂರು	179247
25.	ಶಿವಮೊಗ್ಗ	194766
26.	ತುಮಕೂರು	422892
27.	ಉಡುಪಿ	77346
28.	ಉತ್ತರ ಕನ್ನಡ	182522
	ಒಟ್ಟು	**6320628**

ಈ) ಬಡತನ ರೇಖೆಗಿಂತ ಕೆಳಗಿರುವ ಅರ್ಹ ಕುಟುಂಬಗಳಿಗೆ ಹಸಿರು ಪಡಿತರ ಚೀಟಿಯ ಬದಲಾಗಿ ಹಳದಿ ಪಡಿತರ ಚೀಟಿಗಳನ್ನು ನೀಡಲು ಉದ್ದೇಶಿಸಲಾಗಿದೆ.

ರಾಜ್ಯದಲ್ಲಿ ಅನಿಲ ಆಧಾರಿತ ವಿದ್ಯುತ್ ಯೋಜನೆ

4421 - ಶ್ರೀ ಎಸ್. ಅಂಗಾರ (ಸೂಳ್ಯ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅನಿಲ ಆಧಾರಿತ ವಿದ್ಯುತ್ ಯೋಜನೆಯನ್ನು ಪ್ರಾರಂಭ ಮಾಡಲು ಉದ್ದೇಶಿಸಲಾಗಿದೆಯೇ? ಈ ಯೋಜನೆಯನ್ನು ಪ್ರಾರಂಭಿಸುವ ಬಗ್ಗೆ ಸರ್ಕಾರ ಗುರುತಿಸಿರುವ ಸ್ಥಳ ಯಾವುದು?

ಆ) ಈ ಯೋಜನೆಯಿಂದ ಉತ್ಪಾದನೆ ಮಾಡಲಾಗುವ ವಿದ್ಯುತ್ ಪ್ರಮಾಣವೆಷ್ಟು?

ಇ) ಈ ಯೋಜನೆಯಿಂದ ಉತ್ಪಾದನೆ ಮಾಡಲಾಗುವ ವಿದ್ಯುತ್ತನ್ನು ಬಳಸಲಾಗುವ ಉದ್ದೇಶ ಯಾವುದು?

ಈ) ಈ ಯೋಜನೆಯಿಂದ ಉತ್ಪಾದಿಸುವ ವಿದ್ಯುತ್‌ಗೆ ಪ್ರತಿ ಯೂನಿಟ್‌ಗೆ ತಗಲುವ ಮೊತ್ತವೆಷ್ಟು ?

ಶ್ರೀ ವೀರಕುಮಾರ ಅ. ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಮಂಗಳೂರಿನ ಹತ್ತಿರ ಎರಡು ಸಾವಿರ ಮೆಗಾ ವ್ಯಾಟ್ ಸಾಮರ್ಥ್ಯದ ಅನಿಲ ಆಧಾರಿತ ವಿದ್ಯುತ್ ಯೋಜನೆಯನ್ನು ಸ್ಥಾಪಿಸಬೇಕೆಂಬ ಪ್ರಸ್ತಾಪ ಸರ್ಕಾರದ ಪರಿಶೀಲನೆಯಲ್ಲಿದೆ. ಸರ್ಕಾರವು ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ ಸಂಸ್ಥೆಯೊಂದಿಗೆ ಅನಿಲ ಸಹಕಾರ ಒಪ್ಪಂದವೊಂದನ್ನು ಮಾಡಿಕೊಂಡಿದ್ದು ಈ ಒಪ್ಪಂದದ ಪ್ರಕಾರ ಕೊಚ್ಚಿಯ ಹತ್ತಿರವಿರುವ ಎಲ್.ಎನ್.ಜಿ. ಟರ್ಮಿನಲ್‌ನಿಂದ ಮಂಗಳೂರಿಗೆ ಮತ್ತು ಮಂಗಳೂರಿನಿಂದ ಬೆಂಗಳೂರಿಗೆ ಅನಿಲವನ್ನು ಸರಬರಾಜು ಮಾಡುವ ಜವಾಬ್ದಾರಿಯನ್ನು ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ ವಹಿಸಿಕೊಂಡಿದೆ. ಈ ಬಗ್ಗೆ ಅಧ್ಯಯನ ನಡೆಸಿ ವರದಿಯನ್ನು ಸಲ್ಲಿಸಲು ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಮತ್ತು ಅಭಿವೃದ್ಧಿ ನಿಗಮ ನಿಯಮಿತ ಇವರ ನೇತೃತ್ವದಲ್ಲಿ ವಿದ್ಯುತ್ ನಿಗಮ ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ ಈ ಸಂಸ್ಥೆಗಳ ಅಧಿಕಾರಿಗಳನ್ನೊಳಗೊಂಡ ಅಧ್ಯಯನ ಸಮಿತಿಯನ್ನು ರಚಿಸಲಾಗಿದೆ.

ಆ) ಇ) ಮತ್ತು ಈ) ಅನಿಲ ಆಧಾರಿತ ವಿದ್ಯುತ್ ಯೋಜನೆ ಮತ್ತು ಯೋಜನೆಗೆ ಬೇಕಾಗಿರುವ ಅನಿಲದ ಲಭ್ಯತೆ ಮುಂತಾದ ವಿಷಯಗಳು ಇನ್ನೂ ಪ್ರಾರಂಭಿಕ ಪರಿಶೀಲನೆಯ ಹಂತದಲ್ಲಿರುವುದರಿಂದ ಈ ಬಗ್ಗೆ ಇನ್ನೂ ಖಚಿತ ಮಾಹಿತಿ ಲಭ್ಯವಿರುವುದಿಲ್ಲ.

Loan availed by the State Government

4422 - Sri. Angara S. (Sullia) : Will the Hon'ble Chief Minister be pleased to state?

a) What is the loan availed by the State Government till date? (Details to be furnised)

b) Out of this amount, what is the Internal and External loan liability?

c) What is the interest payable every year for these loans? (Details to be furnished)

Sri S.M. Krishna (Chief Minister) :

a) The loan availed by the State Government as on 31.3.2000 are as follows;